

# ಜೈ ಹಿಂದ್

ಮಂಜುನಾಥ್ ಹುಲಕೋಟಿ

■ ಬಿ.ಆರ್. ಉಷಾ, ಬೆಂಗಳೂರು

ಟೀಚರ್, ಟೀಚರ್ ಒಂದು ಕಥೆ ಹೇಳಿ... ಇವತ್ತು ಬೇಗ ಪಾಠ ಮುಗಿಯಿತಲ್ಲ, ಹೇಳಿ ಟೀಚರ್ ಹೂಂ ಹೂಂ ಆಯ್ತು. ಸರಿ ಗಲಾಟೆ ಮಾಡದೆ ಇರಿ ಹೇಳುತ್ತೇನೆ. ಮಕ್ಕಳೇ ಒಂದು ಕಾಲೇಜು ಇತ್ತು ಆಗ ತಾನೇ ಹೊಸದಾಗಿ ಕ್ಲಾಸ್ ಆರಂಭವಾಗಿತ್ತು. ಕಾಲೇಜಿಗೆ ಒಬ್ಬ ನಾಯಕನನ್ನು ಆಯ್ಕೆ ಮಾಡಬೇಕಿತ್ತು. ವಿದ್ಯಾರ್ಥಿಗಳು ಸೇರಿ ಯೋಚಿಸತೊಡಗಿದರು. ಅದರಲ್ಲಿ ಒಬ್ಬ ಹುಡುಗ ಚೆನ್ನಾಗಿ ಅಡುಗೆ ಮಾಡುತ್ತಿದ್ದ. ವಿವಿಧ ಬಗೆಯ ಸಿಹಿ ತಿಂಡಿ ತಿನಿಸು ಮಾಡಿಕೊಡುತ್ತಿದ್ದ. ಖುಷಿಯಾಗಿ ಎಲ್ಲರನ್ನೂ ಮಾತನಾಡಿಸುತ್ತಿದ್ದ ಅದಕ್ಕೆ ಅವನನ್ನೆ ನಾಯಕನನ್ನಾಗಿ ಆಯ್ಕೆ ಮಾಡಿದರು. ನಾಯಕ ಆದ ಮೇಲೆ ಅವನು ಎಲ್ಲರಿಗೂ ಉಚಿತವಾಗಿ ಊಟ, ತಿಂಡಿ, ಸಿಹಿ, ಬೋಂಡ ಎಲ್ಲವನ್ನೂ ಕೊಟ್ಟ. ವಿದ್ಯಾರ್ಥಿಗಳಿಗೆ ಮೊದ ಮೊದಲು ಬಹಳ ಖುಷಿ ಆಯ್ತು ನಂತರ ಅವನು ಕಲಾಕಾರರಿಗೆ, ಆಟಗಾರರಿಗೆ, ಯಾವುದೇ ಪ್ರೋತ್ಸಾಹ ಕೊಡಲಿಲ್ಲ ಎಲ್ಲರೂ ಅವನ ಬಳಿ ಹೋಗಿ ಸಮಸ್ಯೆ ಹೇಳಿದರು. ಅದಕ್ಕೆ ಆ ನಾಯಕನು ನೃತ್ಯಗಾರರಿಗೆ ಡಯಟ್ ಆಹಾರ, ಆಟಗಾರರಿಗೆ ದಿನಾ ಮೀನು, ಮಾಂಸ, ಮೊಟ್ಟೆ ಕೊಡುವುದಾಗಿ ಹೇಳಿದ.

ಅಯ್ಯೋ ಕರ್ಮ ಇವನ ಬುದ್ಧಿ ಶಕ್ತಿಯೇ ಇಷ್ಟು, ಏನು ಹೇಳಿದರು ಒಂದೇ ಮಂತ್ರ ಎಂದು ಬೈದುಕೊಂಡು ಹೊರ ಬಂದರು. ಹಾಗೂ ಹೀಗೂ ಒಂದು ವರ್ಷವಾಯಿತು, ಆಗ ಎಲ್ಲ ಸೇರಿ ಕಲಾವಿದನನ್ನು ನಾಯಕನನ್ನಾಗಿ ಆಯ್ಕೆ ಮಾಡಿದರು. ಅವನೂ ಅಷ್ಟೇ ಬರೀ ನಾಟಕ ಹಾಡು ಅಂತ ಕಾಲ ಕಳೆದ, ಏನೂ ಕೆಲಸ ಮಾಡಲ್ಲಿಲ್ಲ. ಮತ್ತೆ ಒಂದು ವರ್ಷ ಆಯಿತು ಪುನಃ ನಾಯಕನ ಆಯ್ಕೆ ಶುರುವಾಯಿತು. ಈ ಸಲ ಒಬ್ಬ ಆಟಗಾರನನ್ನು ಆಯ್ಕೆ ಮಾಡಿದರು ಅವನೂ ಅಷ್ಟೇ ಬರಿ ಆಟದಲ್ಲೇ ಆಸಕ್ತಿ, ಬೇರೆ ಏನೂ ಗೊತ್ತಿಲ್ಲ. ಮತ್ತೆ ಒಂದು ವರ್ಷ ಆಯಿತು. ಓಹೋ, ತಪ್ಪು ಮಾಡುತ್ತಿರುವುದು ನಾವು ನಾಯಕರಲ್ಲ ಎಂದು ಆಗ ಅರಿತರು.

ನಾವು ಸರಿಯಾದ ವ್ಯಕ್ತಿಯನ್ನು ಆರಿಸುತ್ತಿಲ್ಲ. ಇದನ್ನು ತಿಳಿದು ಎಲ್ಲರೂ ಒಟ್ಟಿಗೆ ಸೇರಿ ಈ ಸಲ ಸರಿಯಾದ ವ್ಯಕ್ತಿಯನ್ನ ಆಯ್ಕೆ ಮಾಡಬೇಕು, ಇಲ್ಲದಿದ್ದರೆ ನಮಗೆ ತೊಂದರೆ ಎಂದುಕೊಂಡರು. ಒಬ್ಬ ವ್ಯಕ್ತಿ ಇದ್ದ ಅವನು ಓದಿನಲ್ಲಿ ಮುಂದಿದ್ದ, ಹಾಡು ಸ್ವಲ್ಪ ಮಟ್ಟಿಗೆ ಗೊತ್ತಿತ್ತು ಆಟ ನೋಡುತ್ತಿದ್ದ, ಆಸಕ್ತಿ ಇತ್ತು. ಎಲ್ಲದಕ್ಕಿಂತ ಒಳ್ಳೆಯ ವ್ಯಕ್ತಿ. ಇವನೇ ನಾಯಕನ ಸ್ಥಾನಕ್ಕೆ ಸರಿ ಎಂದು ಅವನನ್ನೆ ಆರಿಸಿದರು. ಅವನು ನಾಯಕನಾದ ತಕ್ಷಣ ಗ್ರಂಥಾಲಯಕ್ಕೆ ಹೊಸ ಹೊಸ ಪುಸ್ತಕಗಳನ್ನು ತರಿಸಿ, ಪ್ರತಿಯೊಬ್ಬರೂ ಒಂದು ಗಂಟೆ ಗ್ರಂಥಾಲಯಕ್ಕೆ ಬಂದು ಕಡ್ಡಾಯವಾಗಿ ಓದಬೇಕು ಎಂದು ನಿಯಮ ತಂದ. ಅಂತರ ಕಾಲೇಜು ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿದ. ಉತ್ತಮ ಆಟಗಾರರನ್ನು, ಕಲಾವಿದರನ್ನು ಗುರುತಿಸಿ ರಾಷ್ಟ್ರೀಯ ಮಟ್ಟಕ್ಕೆ ಹೋಗುವುದಕ್ಕೆ ಸಹಾಯ ಮಾಡಿದ. ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ ಅವರ ಓದಿಗೆ ನೆರವಾದ.

ಎಲ್ಲರೂ ತುಂಬಾ ಖುಷಿಯಿಂದ ಕಾಲೇಜಿಗೆ ಬಂದು ಹೋಗುತ್ತಿದ್ದರು. ಅವರು ಆಯ್ಕೆ ಮಾಡಿದ ನಾಯಕನ ಬಗ್ಗೆ ಹೆಮ್ಮೆಯಾಯಿತು. ವಿದ್ಯಾರ್ಥಿಗಳು ಕಾಲೇಜಿನಲ್ಲಿಯೇ ಅಲ್ಲ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಒಳ್ಳೆಯ ನಾಯಕರು ಇದ್ದರೆ ಹೀಗೇ ನಮ್ಮ ದೇಶಕ್ಕೆ ಎಲ್ಲಾ ರೀತಿಯ ಒಳ್ಳೆಯ ಕೆಲಸಗಳನ್ನೂ ಮಾಡುತ್ತಾರೆ. ನಾವು ಕೂಡ ನೆಮ್ಮದಿಯಿಂದ ಇರಬಹುದು.

ನೀವೆಲ್ಲ ಯೋಚಿಸಿ ಯಾವ ಆಸೆಗೂ ಬಲಿಯಾಗದೆ ಒಳ್ಳೆಯ ನಾಯಕನನ್ನು ದೊಡ್ಡವರಾದ ಮೇಲೆ ಆಯ್ಕೆ ಮಾಡುತ್ತೀರಾ?

ಹೂಂ ಟೀಚರ್ ಆಯ್ತು.

ಜೈ ಹಿಂದ್...

■